ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 1 – ಗಣಿತದಲ್ಲಿ ವಿನ್ಯಾಸಗಳು

I. ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (4 × 1 = 4)

1. 9, 18, 27, 36, ಈ ಸಂಖ್ಯಾ ಶ್ರೇಣಿಯ ಮುಂದಿನ ಸಂಖ್ಯೆ.

A. 100 B. 81 C. 45 D. 65

2.  ಈ ವಿನ್ಯಾಸವನ್ನು ಮುಂದುವರಿಸಿದಾಗ.

A.  B.  C.  D. 

3. 1, 4, 9, 16 ಈ ಸರಣಿಯ ಐದನೇ ಪದ.

A. 15 B. 25 C. 49 D. 20

4. 1, 11, 111, 1111 ಈ ಸರಣಿಯ ಮುಂದಿನ ಪದ.

A. 111111 B. 111 C. 11111 D. 1111111

II. ಬಿಟ್ಟ ಸ್ಥಳಗಳನ್ನು ತುಂಬಿರಿ. (4 × 1 = 4)

5. 1, 3, 6, 10, 15.... ಈ ಸಂಖ್ಯೆಗಳನ್ನು _____ ಸಂಖ್ಯೆಗಳು ಎನ್ನುವರು.

6. 1, 4, 9, 16, 25.... ಈ ಸಂಖ್ಯಾ ಸರಣಿಯನ್ನು ______ ಸಂಖ್ಯೆಗಳು ಎನ್ನುವರು.

7. 1, 8, 27, 64 ಈ ಶ್ರೇಣಿಯ ಮುಂದಿನ ಸಂಖ್ಯೆ _______.

8. a, e, _, o, u ಈ ಇಂಗ್ಲೀಷ್ ಸ್ವರಾಕ್ಷರ ಸರಣಿಯಲ್ಲಿ ಬಿಟ್ಟು ಹೋಗಿರುವ ಅಕ್ಷರ ___.

III. ಕೆಳಗಿನವುಗಳಿಗೆ ಉತ್ತರಿಸಿ (4 × 1 = 4)

9. 3, 6, 9, 12 ... ಈ ವಿನ್ಯಾಸದ ಮುಂದಿನ ಸಂಖ್ಯೆ ಯಾವುದು?

10. ತ್ರಿಕೋನೀಯ ಸಂಖ್ಯೆಗಳು ವ್ಯಾಖ್ಯಾನಿಸಿ

11. 2, 4, 8, 16, 32... ಈ ಸಂಖ್ಯಾ ಶ್ರೇಣಿಯ ನಿಯಮ ಬರೆಯಿರಿ.

12. 3, 9, 27, 81 ... ಈ ಸಂಖ್ಯಾ ಶ್ರೇಣಿಯ ನಿಯಮ ಬರೆಯಿರಿ.

IV. ಕೆಳಗಿನ ಲೆಕ್ಕಗಳನ್ನು ಮಾಡಿ (2 × 2 = 4)

13. 1, 3, __, 7, 9, __ ಬಿಟ್ಟು ಹೋಗಿರುವ ಪದಗಳನ್ನು ಬರೆಯಿರಿ.

14. 1, 2, 4, 7, 11 ಸರಣಿಯ ಮುಂದಿನ ಸಂಖ್ಯೆ ಯಾವುದು? ಮತ್ತು ಏಕೆ?

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ (1 × 4 = 4)

15. ಈ ಸರಣಿಯ ಮುಂದಿನ ಸಾಲನ್ನು ಬರೆದು, ನಿಯಮವನ್ನು ಬರೆಯಿರಿ.

1

1 2 1

1 2 3 2 1

ಮಾದರಿ ಉತ್ತರಗಳು

1. C. 45
2. C

3. B. 25

4. C. 11111

5. ತ್ರಿಕೋನೀಯ

6. ವರ್ಗ

7.125

8. i

9. 15

10. ನಿರ್ದಿಷ್ಟ ಸಂಖ್ಯೆ ಗಳ ಚುಕ್ಕೆಗಳನ್ನು ಬಳಸಿ ತ್ರಿಭುಜ ದಂತೆ ಜೋಡಿಸಬಹುದಾದ ಸಂಖ್ಯೆಗಳನ್ನು ತ್ರಿಕೋನೀಯ ಸಂಖ್ಯೆಗಳು ಎನ್ನುವರು

11. ಹಿಂದಿನ ಸಂಖ್ಯೆಗೆ 2 ರಿಂದ ಗುಣಿಸಿ (ಮುಂದಿನ ಸಂಖ್ಯೆಯನ್ನು ಪಡೆಯುವುದು).

12. ಹಿಂದಿನ ಸಂಖ್ಯೆಗೆ 3 ರಿಂದ ಗುಣಿಸಿ (ಮುಂದಿನ ಸಂಖ್ಯೆಯನ್ನು ಪಡೆಯುವುದು).

13. ಬಿಟ್ಟು ಹೋಗಿರುವ ಪದಗಳು: 5 ಮತ್ತು 11

14. ಸರಣಿಯ ಮುಂದಿನ ಸಂಖ್ಯೆ 16

ಏಕೆಂದರೆ: ಕೊಟ್ಟ ಸಂಖ್ಯೆಗೆ ಮುಂದಿನ ಸ್ವಾಭಾವಿಕ ಸಂಖ್ಯೆಯನ್ನು ಕೂಡಬೇಕು. (ಉದಾ: 1, 1+1=2, 2+2=4, 4+3=7, 7+4=11, 11+5=16).

15. ಸರಣಿಯ ಮುಂದಿನ ಸಾಲು: 1 2 3 4 3 2 1

ನಿಯಮ:

$1^2 = 1$

$11^2 = 121$

$111^2 = 12321$

$1111^2 = 1234321$

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 2 : ರೇಖೆಗಳು ಮತ್ತು ಕೋನಗಳು

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (4 × 1 = 4)

1. ಡಿಗ್ರಿಗಳಲ್ಲಿ ಒಂದು ಪೂರ್ಣ ತಿರುವಿನ ಅಳತೆಯು:

A. 90° B. 360° C. 180° D. 270°

2. ಸಾಮಾನ್ಯ ಆರಂಭಿಕ ಬಿಂದುವನ್ನು ಹೊಂದಿರುವ ಎರಡು ಕಿರಣಗಳಿಂದ ಉಂಟಾದ ಆಕೃತಿ:

A. ಬಿಂದು B. ರೇಖೆ C. ಸಮತಲ D. ಕೋನ

3. ಇವುಗಳಲ್ಲಿ ಕಿರಣದ ಸಂಕೇತ:

A. B.  C  D.

4. 30° ಸೂಚಿಸುವ ಗಡಿಯಾರ

A.

B.

C.

D.

II. ಬಿಟ್ಟ ಸ್ಥಳಗಳನ್ನು ತುಂಬಿರಿ. (2 × 1 = 2)

5. ಕೋನವನ್ನು ಅರ್ಧಿಸುವ ರೇಖೆಯನ್ನು _____ ಎನ್ನುವರು.

6. ಕೋನಗಳ ಅಳತೆಯನ್ನು ______ ಗಳಲ್ಲಿ ಅಳೆಯುವರು.

III. ಹೊಂದಿಸಿ ಬರೆಯಿರಿ. (4 × 1 = 4)

7. 90° ಗೆ ಸಮ - a. ಸರಳಕೋನ

8. 90° ಗಿಂತ ಕಡಿಮೆ - b. ಲಂಬಕೋನ

9. 180° ಗೆ ಸಮ - c. ಪೂರ್ಣ ಕೋನ

10. 360° ಗೆ ಸಮ - d. ಲಘುಕೋನ

IV. ಕೆಳಗಿನವುಗಳನ್ನು ವ್ಯಾಖ್ಯಾನಿಸಿ (2 × 1 = 2)

11. ಬಿಂದು 12. ಕಿರಣ

V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (2 × 2 = 4)

13. ಕೋನಮಾಪಕದ ಸಹಾಯದಿಂದ 120° ಅಳತೆಯ ಕೋನವನ್ನು ರಚಿಸಿ.

14. ಕೋನಮಾಪಕದ ಸಹಾಯದಿಂದ 80° ಅಳತೆಯ ಕೋನವನ್ನು ರಚಿಸಿ.

VI. ಕೆಳಗಿನ ಸಮಸ್ಯೆಯನ್ನು ಬಿಡಿಸಿ. (1 × 4 = 4)

15. ಕೆಳಗಿನವುಗಳನ್ನು ಹೆಸರಿಸಿ:

i) 6 ಬಿಂದುಗಳು ii) 4 ಕೋನಗಳು
iii)4ಕಿರಣಗಳು iv) 2 ಸರಳರೇಖೆಗಳು



ಮಾದರಿ ಉತ್ತರಗಳು

1. B. 360°
2. D. ಕೋನ
3. C. 
4. A

5. ಕೋನಾರ್ಧಕರೇಖೆ

6. ಡಿಗ್ರಿ

7. 90° ಗೆ ಸಮ - b. ಲಂಬಕೋನ

8. 90° ಗಿಂತ ಕಡಿಮೆ - d. ಲಘುಕೋನ

9. 180° ಗೆ ಸಮ - a. ಸರಳಕೋನ

10. 360° ಗೆ ಸಮ - c. ಪೂರ್ಣ ಕೋನ

11. ಬಿಂದು: ನಿರ್ದಿಷ್ಟವಾದ ಸ್ಥಾನವನ್ನು ನಿರ್ಧರಿಸುವ, ಉದ್ದ, ಅಗಲ ಅಥವಾ ಎತ್ತರವಿಲ್ಲದ ಆಕೃತಿ.

12. ಕಿರಣ: ಒಂದು ಬಿಂದುವಿನಿಂದ ಪ್ರಾರಂಭವಾಗಿ ಒಂದು ದಿಕ್ಕಿನಲ್ಲಿ ಅನಿರ್ದಿಷ್ಟವಾಗಿ ಚಲಿಸುವ ರೇಖೆ.

13. 

14. 

15.

i) 6 ಬಿಂದುಗಳು: P, O, R, Q, T, S

ii) 4 ಕೋನಗಳು: ∠POR, ∠POS, ∠SOQ, ∠ROQ

iii) 4 ಕಿರಣಗಳು: OS, PO, OR, OQ

iv) 2 ಸರಳರೇಖೆಗಳು: PQ, RS

ತರಗತಿ : 6 **ವಿಷಯ : ಗಣಿತ** **ಅಂಕ : 20**

ಘಟಕ 3: ಸಂಖ್ಯಾ ಆಟ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (4 × 1 = 4)

1. 3, 1, 0 ಅಂಕಿಗಳನ್ನು ಬಳಸಿ ರಚಿಸಬಹುದಾದ 5 ಅಂಕಿಯ ಅತಿ ದೊಡ್ಡ ಸಂಖ್ಯೆ.

A. 10003 B. 33310 C. 33333 D. 33301

2. 2, 5, 4 ಅಂಕಿಗಳನ್ನು ಬಳಸಿ ರಚಿಸಬಹುದಾದ 5 ಅಂಕಿಯ ಪಾಲಿಂಡ್ರೋಮ್ ಸಂಖ್ಯೆ.

A. 22254 B. 55542 C. 25452 D. 44522

3. ಇದು ಕಪ್ರೇಕರ್ ಮ್ಯಾಜಿಕ್ ಸಂಖ್ಯೆಯಾಗಿದೆ.

A. 1234 B. 4321 C. 6174 D. 9999

4. ಪಾಲಿಂಡ್ರೋಮ್ ಸಂಖ್ಯೆಗಳ ಅತೀ ಮುಖ್ಯ ಗುಣಲಕ್ಷಣ.

A. ಸಂಖ್ಯೆಗಳು 10 ರಿಂದ ಭಾಗಿಸಲ್ಪಡುತ್ತವೆ.

B. ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಓದಿದಾಗ ಒಂದೇ ಇರುತ್ತದೆ.

C. ಅವುಗಳಲ್ಲಿ ಅಂಕಿಗಳ ಪುನರಾವರ್ತನೆ ಇರುವುದಿಲ್ಲ.

D. ಅವು ಯಾವಾಗಲೂ ಸಮ ಸಂಖ್ಯೆಗಳಾಗಿರುತ್ತವೆ.

II. ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರವನ್ನು ಆರಿಸಿ ತುಂಬಿರಿ. (4 × 1 = 4)

5. ಅಂಕಿಗಳ ಮೊತ್ತ 15 ಆಗುವ ಅತಿ ಚಿಕ್ಕ ಸಂಖ್ಯೆ _____ [96000 / 150000]

6. 1111 _____ ಈ ಖಾಲಿ ಸ್ಥಳದಲ್ಲಿ ತುಂಬಿಸಬಹುದಾದ ಅತ್ಯಂತ ಚಿಕ್ಕ ಸಂಖ್ಯೆ, ಇದರಿಂದ ಅಂಕಿಗಳ ಮೊತ್ತ ಸಮ ಸಂಖ್ಯೆಯಾಗಬೇಕು. [0 / 1]

7. ಅಂಕಿಗಳ ಮೊತ್ತ 11 ಬರುವ ಅತ್ಯಂತ ಚಿಕ್ಕ ಸಂಖ್ಯೆ _____ [29 / 74]

8. ಈ ಶ್ರೇಣಿಯಲ್ಲಿ ಮುಂದಿನ ಸಂಖ್ಯೆ ಯಾವುದು ? 2, 4, 8, 16, ______ ? [32 / 18]

III. ಸರಿ ಅಥವಾ ತಪ್ಪು ಎಂದು ತಿಳಿಸಿ (4 × 1 = 4)

9. 6, 7, 0, 9 ಅಂಕಿಗಳನ್ನು ಬಳಸಿ ರಚಿಸಬಹುದಾದ 4 ಅಂಕಗಳ ಅತೀ ದೊಡ್ಡ ಸಂಖ್ಯೆ 9760 ಆಗಿರುತ್ತದೆ.

10. 8439 ಇದು ಒಂದು ಬೆಸ ಸಂಖ್ಯೆ.

11. 2787 ಇದು ಒಂದು ಸರಿ ಸಂಖ್ಯೆ.

12. 1221 ಇದು ಒಂದು ಪಾಲಿಂಡ್ರೋಮ್ ಸಂಖ್ಯೆಯಾಗಿದೆ.

IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (4 × 1 = 4)

13. ಪಾಲಿಂಡ್ರೋಮಿಕ್ ಸಂಖ್ಯೆಯನ್ನು ವ್ಯಾಖ್ಯಾನಿಸಿ.

14. ಕೆಳಗಿನ ಕೋಷ್ಟಕದಲ್ಲಿ ಸೂಪರ್ ಸೆಲ್ ಗಳನ್ನು ಗುರುತಿಸಿ

9780	9882	5662	1290	7662	8192

15. 1, 2, 7, 9, 4 ಅಂಕಿಗಳನ್ನು ಬಳಸಿಕೊಂಡು ಅತಿ ದೊಡ್ಡ ಐದು ಅಂಕಿಯ ಸಂಖ್ಯೆಯನ್ನು ಬರೆಯಿರಿ.

16. ನಾಲ್ಕು ಅಂಕಿಗಳ ಅತಿ ಚಿಕ್ಕ ಪಾಲಿಂಡ್ರೋಮಿಕ್ ಸಂಖ್ಯೆಯನ್ನು ಬರೆಯಿರಿ.

V. ಕೆಳಗಿನ ಲೆಕ್ಕಗಳನ್ನು ಬಿಡಿಸಿ (2 × 2 = 4)

17. ಕೊಟ್ಟಿರುವ ಕೋಷ್ಟಕದಲ್ಲಿ ಬಣ್ಣ ಹಾಕಿರುವ ಬಾಕ್ಸ್ನಲ್ಲಿ ಸೂಪರ್ ಸೆಲ್ಗಳು ಬರುವಂತೆ ನಾಲ್ಕು ಅಂಕಿ ಸಂಖ್ಯೆಗಳನ್ನು ತುಂಬಿರಿ

6543								8653	

18. 4, 6, 8, 1 ಅಂಕಿಗಳನ್ನು ಬಳಸಿಕೊಂಡು ಅತಿ ದೊಡ್ಡ ಮತ್ತು ಅತಿ ಚಿಕ್ಕ ನಾಲ್ಕು ಅಂಕಿಯ ಸಂಖ್ಯೆಯ ವ್ಯತ್ಯಾಸವನ್ನು ಬರೆಯಿರಿ.

ಮಾದರಿ ಉತ್ತರಗಳು

1. B. 33310

2. C. 25452

3. C. 6174

4.B. ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಓದಿದಾಗ ಒಂದೇ ಇರುತ್ತದೆ.

5. 96000

6. 0

7. 29

8. 32

9. ಸರಿ

10. ಸರಿ

11. ತಪ್ಪು

12. ಸರಿ

13. ಪಾಲಿಂಡ್ರೋಮಿಕ್ ಸಂಖ್ಯೆ: ಸಂಖ್ಯೆಗಳನ್ನು ಎಡದಿಂದ ಬಲಕ್ಕೆ ಮತ್ತು ಬಲದಿಂದ ಎಡಕ್ಕೆ ಓದಿದಾಗಲೂ ಒಂದೇ ಇರುತ್ತದೆ.

14.

9780	9882	5662	1290	7662	8192

15. 97421

16. 1001

17

6543	6872	5632	4890	5555	4123	6452	7641	8653	9542

18. ದೊಡ್ಡ ಸಂಖ್ಯೆ = 8641

ಚಿಕ್ಕ ಸಂಖ್ಯೆ = 1468

ವ್ಯತ್ಯಾಸ = 8641 - 1468 = 7173

ತರಗತಿ : 6 **ವಿಷಯ : ಗಣಿತ** **ಅಂಕ : 20**

ಘಟಕ 4: ದತ್ತಾಂಶಗಳ ನಿರ್ವಹಣೆ ಮತ್ತು ಪ್ರಸ್ತುತಿ

I. ಬಿಟ್ಟ ಸ್ಥಳಗಳನ್ನು ತುಂಬಿರಿ. (4 × 1 = 4)

1. ಸಂಗತಿಗಳು, ಅಳತೆಗಳು, ಸಂಖ್ಯೆಗಳು ಅಥವಾ ವೀಕ್ಷಣೆಗಳ ಸಂಗ್ರಹವನ್ನು ______ ಎನ್ನುವರು.
2. ______ ಯು ಕಂಬಸಾಲುಗಳಲ್ಲಿ ದತ್ತಾಂಶಗಳನ್ನು ವ್ಯಕ್ತಪಡಿಸುವ ನಕ್ಷೆಯ ವಿಧವಾಗಿದೆ.
3. ಒಂದು ಘಟನೆಯು ಸಂಭವಿಸುವ ಎಣಿಕೆಗಳನ್ನು ______ ಎನ್ನುವರು.
4. ______ ನಕ್ಷೆಯು ದತ್ತಾಂಶಗಳನ್ನು ಚಿತ್ರಗಳ ಮೂಲಕ ಪ್ರತಿನಿಧಿಸುತ್ತದೆ.

II. ಕೆಳಗಿನ ಹೇಳಿಕೆಗಳು ಸರಿಯಿದ್ದರೆ (✓) ಗುರುತು, ತಪ್ಪಿದ್ದರೆ (x) ಗುರುತು ಹಾಕಿ. (4 × 1 = 4)

5. ಒಂದು ಸ್ತಂಭ ನಕ್ಷೆ ಕೇವಲ ಲಂಬವಾಗಿರುವ ಸ್ತಂಭಗಳನ್ನು ಹೊಂದಿರುತ್ತದೆ.
6. ಸಂಖ್ಯಾ ದತ್ತಾಂಶಗಳನ್ನು ಚಿತ್ರ ನಕ್ಷೆ ಮತ್ತು ಸ್ತಂಭನಕ್ಷೆಯ ಮೂಲಕ ಪ್ರತಿನಿಧಿಸಬಹುದು.
7. ದತ್ತಾಂಶ ಪ್ರಮಾಣ ಹೆಚ್ಚಿದ್ದಾಗ ಅದನ್ನು ಚಿತ್ರ ನಕ್ಷೆಯ ಮೂಲಕ ಪ್ರತಿನಿಧಿಸುವುದು ಸೂಕ್ತ.
8. ಸ್ತಂಭ ನಕ್ಷೆಗಳು ಸಮಾನ ಅಗಲಗಳುಳ್ಳ ಸ್ತಂಭಗಳನ್ನು ಹೊಂದಿರುತ್ತವೆ.

III. ಕೆಳಗಿನವುಗಳನ್ನು ವ್ಯಾಖ್ಯಾನಿಸಿ / ಉತ್ತರಿಸಿ (3 × 1 = 3)

9. ದತ್ತಾಂಶಗಳು ಎಂದರೇನು?

10.  = 5 ಆದರೆ,  ಎಷ್ಟು?

11. ಸ್ತಂಭ ನಕ್ಷೆ ಎಂದರೇನು?

IV. ಕೆಳಗಿನ ಪ್ರಶ್ನೆಗೆ ಉತ್ತರಿಸಿ (1 × 2 = 2)

12. ಸ್ತಂಭ ನಕ್ಷೆಯಲ್ಲಿ ಕೊಟ್ಟಿರುವ ಒಂದು ಅರಣ್ಯ ಪ್ರದೇಶದಲ್ಲಿ ಬಿದ್ದ ಮಳೆಯ ಪ್ರಮಾಣವನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ



a) ಐದು ತಿಂಗಳುಗಳಲ್ಲಿ ಆದ ಒಟ್ಟು ಮಳೆಯ ಪ್ರಮಾಣ ಎಷ್ಟು?
b) ಗರಿಷ್ಠ ಪ್ರಮಾಣದ ಮಳೆಯಾಗಿರುವ ತಿಂಗಳು ಯಾವುದು?

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ (1 × 3 = 3)

13. ಕೆಳಗಿನ ಕೋಷ್ಟಕದಲ್ಲಿ ಕೆಲವು ಪ್ರಾಣಿಗಳ ಓಟದ ವೇಗವನ್ನು ನೀಡಲಾಗಿದೆ. ಈ ದತ್ತಾಂಶವನ್ನು ಸ್ತಂಭನಕ್ಷೆಯಲ್ಲಿ ಪ್ರತಿನಿಧಿಸಿ.

ಪ್ರಾಣಿಗಳು	ನಾಯಿ	ಸಿಂಹ	ಝೀಬ್ರಾ	ಹುಲಿ	ಚಿರತೆ
ವೇಗ (ಕಿ.ಮೀ/ಗಂಟೆ	20	60	30	70	80

VI. ಕೆಳಗಿನ ಸಮಸ್ಯೆಯನ್ನು ಬಿಡಿಸಿ (1 × 4 = 4)

14. ಒಂದು ತರಗತಿಯ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಚಿತ್ರನಕ್ಷೆಯಲ್ಲಿ ಪ್ರತಿನಿಧಿಸಲಾಗಿದೆ. (ಪ್ರಮಾಣ : 1 ಪೂರ್ಣ ತ್ರಿಭುಜ (△) = 100 ಅಂಕಗಳು, ಈ ಕೆಳಗಿನ ದತ್ತಾಂಶಗಳಿಗೆ ಕೋಷ್ಟಕ ತಯಾರಿಸಿ ಅಂಕಗಳನ್ನು ಬರೆಯಿರಿ.



ಮಾದರಿ ಉತ್ತರಗಳು

1. ದತ್ತಾಂಶ

2. ಸ್ತಂಭ ನಕ್ಷೆ

3. ಆವೃತ್ತಿ

4. ಚಿತ್ರನಕ್ಷೆ

5.ತಪ್ಪು

6. ಸರಿ

7. ತಪ್ಪು

8. ಸರಿ

9. ದತ್ತಾಂಶಗಳು: ಸಂಗತಿಗಳು, ಸಂಖ್ಯೆಗಳು, ಅಳತೆಗಳು, ವೀಕ್ಷಣೆಗಳು ಮತ್ತು ಇತರೆ ವಿವರಣೆಗಳ ಮಾಹಿತಿ.

10. 30

11. ಸ್ತಂಭ ನಕ್ಷೆ:ಸ್ತಂಭ ನಕ್ಷೆಗಳು ಸಮಾನ ಅಗಲಗಳುಳ್ಳ ಸ್ತಂಭಗಳನ್ನು ಹೊಂದಿವೆ. (ಇವು ದತ್ತಾಂಶಗಳನ್ನು ಕಂಬಸಾಲುಗಳಲ್ಲಿ ಪ್ರತಿನಿಧಿಸುತ್ತವೆ).

12. a) 130   b) ಮಾರ್ಚ್

13.



14.

ವಿದ್ಯಾರ್ಥಿಗಳ ಹೆಸರು	ಪಡೆದ ಅಂಕಗಳು
ಸವಿತ	500
ಮಮತ	650
ಸಮಂತ	600
ತೇಜಸ್	450
ಜನನಿ	550

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 5: ಅವಿಭಾಜ್ಯ ಸಮಯ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (5 × 1 = 5)

1. ಈ ಸಂಖ್ಯೆಯು 66 ರ ಅಪವರ್ತನ ಅಲ್ಲ.

A. 3 B. 6 C. 11 D. 4

2. ಈ ಸಂಖ್ಯೆ 14 ರ ಅಪವರ್ತ್ಯವಾಗಿದೆ.

A. 28 B. 44 C. 80 D. 21

3. 1305 ನ್ನು ಪೂರ್ಣವಾಗಿ ಭಾಗಿಸುವ ಸಂಖ್ಯೆ.

A. 13 B. 9 C. 5 D. 6

4. ಈ ಸಂಖ್ಯಾ ಜೋಡಿಗಳು ಸಹಅವಿಭಾಜ್ಯವಾಗಿವೆ.

A. 15 ಮತ್ತು 39 B. 17 ಮತ್ತು 69 C. 81 ಮತ್ತು 18 D. 24 ಮತ್ತು 87

5. 48 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ಈ ರೀತಿ ವ್ಯಕ್ತಪಡಿಸಬಹುದು.

A. 2×2×2×2×3×5 B. 3×2×5×1 C. 2×2×2×2×3 D. 1×2×2×2×3

II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳೊಂದಿಗೆ ಭರ್ತಿಮಾಡಿ. (4 × 1 = 4)

6. ಅವಿಭಾಜ್ಯವಲ್ಲದ ಮತ್ತು ಸಂಯುಕ್ತವೂ ಅಲ್ಲದ ಸಂಖ್ಯೆ _____.

7. ______ ಇದು ಸಮ ಅವಿಭಾಜ್ಯ ಸಂಖ್ಯೆಯಾಗಿದೆ.

8. 1 ನ್ನು ಮಾತ್ರ ಸಾಮಾನ್ಯ ಅಪವರ್ತನವನ್ನಾಗಿ ಹೊಂದಿರುವ ಸಂಖ್ಯೆಗಳನ್ನು ______ ಎನ್ನುವರು.

9. ಅತ್ಯಂತ ಚಿಕ್ಕ ಸಂಯುಕ್ತ ಸಂಖ್ಯೆ _____.

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (4 × 1 = 4)

10. ವ್ಯಾಖ್ಯಾನಿಸಿ ಅವಿಭಾಜ್ಯ ಸಂಖ್ಯೆಗಳು

11. ವ್ಯಾಖ್ಯಾನಿಸಿ ಸಂಯುಕ್ತ ಸಂಖ್ಯೆಗಳು

12. 5 ರಿಂದ ಭಾಗವಾಗುವ 3 ಅಂಕಿಗಳ ಅತ್ಯಂತ ದೊಡ್ಡ ಸಂಖ್ಯೆ ಯಾವುದು?

13. ಸಹ ಅವಿಭಾಜ್ಯ ಸಂಖ್ಯೆಗಳು ಎಂದರೇನು?

IV. ಕೆಳಗಿನ ಲೆಕ್ಕಗಳನ್ನು ಬಿಡಿಸಿ (2 × 2 = 4)

14. 200 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ವ್ಯಕ್ತಪಡಿಸಿ.

15. 12 ಮತ್ತು 15 ರ ಸಾಮಾನ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ.

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ . (1 × 3 = 3)

16. 45 ಮತ್ತು 108 ಈ ಸಂಖ್ಯೆಗಳು ಸಹ ಅವಿಭಾಜ್ಯಗಳೇ ಪರೀಕ್ಷಿಸಿ.

ಮಾದರಿ ಉತ್ತರಗಳು

1. D. 4
2. A. 28
3. C. 5
4. A. 15 ಮತ್ತು 39
5. C. 2×2×2×2×3

6. 1

7. 2

8. ಸಹ ಅವಿಭಾಜ್ಯಗಳು

9. 4

10. ಅವಿಭಾಜ್ಯ ಸಂಖ್ಯೆಗಳು: ಕೇವಲ 1 ಮತ್ತು ಅದೇ ಸಂಖ್ಯೆಯನ್ನು ಅಪವರ್ತನಗಳನ್ನಾಗಿ ಹೊಂದಿರುವ ಸಂಖ್ಯೆಗಳು.

11. ಸಂಯುಕ್ತ ಸಂಖ್ಯೆಗಳು: ಎರಡಕ್ಕಿಂತ ಹೆಚ್ಚು ಅಪವರ್ತನಗಳನ್ನು ಹೊಂದಿರುವ ಸಂಖ್ಯೆಗಳು.

12. 995

13. ಸಹ ಅವಿಭಾಜ್ಯ ಸಂಖ್ಯೆಗಳು:ಎರಡು ಸಂಖ್ಯೆಗಳು 1 ನ್ನು ಮಾತ್ರ ಸಾಮಾನ್ಯ ಅಪವರ್ತನವನ್ನಾಗಿ ಹೊಂದಿದ್ದರೆ ಅವುಗಳು ಸಹ ಅವಿಭಾಜ್ಯಗಳು.

14. 200 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ಈ ರೀತಿ ವ್ಯಕ್ತಪಡಿಸಬಹುದು:

200 = 1 × 2 × 2 × 2 × 5 × 5

15. 12 ರ ಅಪವರ್ತನಗಳು = 1, 2, 3, 4, 6, 12

15 ರ ಅಪವರ್ತನಗಳು = 1, 3, 5, 15

ಆದ್ದರಿಂದ 12 ಮತ್ತು 15 ರ ಸಾಮಾನ್ಯ ಅಪವರ್ತನಗಳು = 1, 3

16.

45 ರ ಅಪವರ್ತನಗಳು = 1, 3, 5, 9, 15, 45

108 ರ ಅಪವರ್ತನಗಳು = 1, 2, 3, 4, 6, 9, 12, 18, 36, 54, 108

ನಿರ್ಧಾರ: 45 ಮತ್ತು 108 ಸಾಮಾನ್ಯ ಅಪವರ್ತನಗಳನ್ನು ಹೊಂದಿವೆ, ಆದ್ದರಿಂದ ಇವು ಸಹ ಅವಿಭಾಜ್ಯಗಳಲ್ಲ.

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 6 : ಸುತ್ತಳತೆ ಮತ್ತು ವಿಸ್ತೀರ್ಣ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (4 × 1 = 4)

1. ಬಾಹುವಿನ ಅಳತೆ 10 cm ಇರುವ ಚೌಕದ ವಿಸ್ತೀರ್ಣ:

A. 100 cm^2 B. 10 sq cm C. 40 sq cm D. 50 sq cm

2. ಆಯತದ ವಿಸ್ತೀರ್ಣ ಕಂಡುಹಿಡಿಯುವ ಸೂತ್ರ:

A. 4 × ಉದ್ದ B. ಉದ್ದ × ಅಗಲ C. 2 × (ಉದ್ದ + ಅಗಲ) D. ಉದ್ದ × ಉದ್ದ

3. ಕೆಳಗಿನವುಗಳಲ್ಲಿ ಕಡಿಮೆ ಸುತ್ತಳತೆಯನ್ನು ಹೊಂದಿರುವ ಆಕೃತಿ ಯಾವುದು?

A. 6 cm ಬಾಹುವಿನ ಚೌಕ B. 5 cm ಉದ್ದ, 4 cm ಅಗಲದ ಆಯತ

C. ಎರಡೂ ಸಮನಾಗಿವೆ D. ಯಾವುದು ಅಲ್ಲ

4. ಒಂದು ಆಕೃತಿಯ ಒಟ್ಟು ಸುತ್ತಳತೆ 24 cm ಇದೆ.



A. 3 cm B. 4 cm C. 6 cm D. 5 cm

II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳೊಂದಿಗಭರ್ತಿಮಾಡಿ. (3 × 1 = 3)

5. ಬಾಹುಗಳು 4 cm, 5 cm ಮತ್ತು 6 cm ಇರುವ ತ್ರಿಭುಜದ ಸುತ್ತಳತೆ _____.

6. 7 m ಉದ್ದವಿರುವ ಚೌಕಾಕೃತಿಯ ನೆಲದ ವಿಸ್ತೀರ್ಣ _____.

7. ಒಂದು ಚೌಕಾಕೃತಿಯ ಸುತ್ತಳತೆಯು 64 cm ಆದರೆ, ಅದರ ವಿಸ್ತೀರ್ಣ _____.

III. ಕೆಳಗಿನ ಲೆಕ್ಕಗಳನ್ನು ಬಿಡಿಸಿ (3 × 2 = 6)

8. 3 cm ಉದ್ದವಿರುವ ಚೌಕದ ಸುತ್ತಳತೆ ಮತ್ತು ವಿಸ್ತೀರ್ಣ ಕಂಡು ಹಿಡಿಯಿರಿ.

9. 2 cm ಅಗಲ ಮತ್ತು 1 cm ಉದ್ದ ಇರುವ ಆಯತದ ಸುತ್ತಳತೆ ಮತ್ತು ವಿಸ್ತೀರ್ಣ ಕಂಡು ಹಿಡಿಯಿರಿ.

10. 30 cm^2 ವಿಸ್ತೀರ್ಣ ಇರುವ ಆಯತದ ಉದ್ದ 6 cm ಇದೆ. ಆಯತದ ಅಗಲವನ್ನು ಕಂಡು ಹಿಡಿಯಿರಿ.

IV. ಕೆಳಗಿನ ಸಮಸ್ಯೆಯನ್ನು ಬಿಡಿಸಿ . (1 × 3 = 3)

11. 32 cm ಉದ್ದವಿರುವ ದಾರದಿಂದ ಒಂದು ಚೌಕಕಾರದ ಆಕೃತಿಯನ್ನು ಮಾಡಿದರೆ, ಪ್ರತಿ ಬಾಹುವಿನ ಅಳತೆ ಎಷ್ಟಿರುತ್ತದೆ?

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ . (1 × 4 = 4)

12. 120 m ಅಗಲ ಮತ್ತು 130 m ಉದ್ದ ಇರುವ ಆಯತಾಕಾರದ ಉದ್ಯಾನವನದ ಸುತ್ತ ತಂತಿ ಬೇಲಿ ಹಾಕಲು ಪ್ರತಿ ಮೀಟರ್‌ಗೆ ₹ 30 ರಂತೆ ಒಟ್ಟು ಎಷ್ಟು ವೆಚ್ಚವಾಗುತ್ತದೆ?

ಮಾದರಿ ಉತ್ತರಗಳು

1. A. 100 cm^2

2. B. ಉದ್ದ × ಅಗಲ

3. B. 5 cm ಉದ್ದ, 4 cm ಅಗಲದ ಆಯತ (ಕಾರಣ: ಚೌಕದ ಸುತ್ತಳತೆ 24 cm, ಆದರೆ ಆಯತದ ಸುತ್ತಳತೆ ಕೇವಲ 18 cm)

4. A. 3 cm (ಕಾರಣ: 24 - (4+4+4+4+5) = 24 - 21 = 3 cm)

5. 15 cm (4+5+6 = 15)

6. 49 m^2 (7 × 7 = 49)

7. 256 cm^2 (ಸುತ್ತಳತೆ 64 cm ಅಂದರೆ ಒಂದು ಬಾಹು 16 cm. ವಿಸ್ತೀರ್ಣ = 16 × 16 = 256)

8. ಚೌಕದ ಬಾಹುವಿನ ಉದ್ದ = 3 cm

ಚೌಕದ ಸುತ್ತಳತೆ = 4 × ಉದ್ದ = 4 × 3 = 12 cm

ಚೌಕದ ವಿಸ್ತೀರ್ಣ = ಉದ್ದ × ಉದ್ದ = 3 × 3 = 9 cm^2

9. ಆಯತದ ಉದ್ದ = 1 cm, ಅಗಲ = 2 cm

ಆಯತದ ಸುತ್ತಳತೆ = 2(ಉದ್ದ + ಅಗಲ) = 2(1 + 2) = 2(3) = 6 cm

ಆಯತದ ವಿಸ್ತೀರ್ಣ = ಉದ್ದ × ಅಗಲ = 1 × 2 = 2 cm^2

10. ಆಯತದ ವಿಸ್ತೀರ್ಣ = 30 cm^2 , ಉದ್ದ = 6 cm

ವಿಸ್ತೀರ್ಣ = ಉದ್ದ × ಅಗಲ

30 = 6 × ಅಗಲ

ಅಗಲ = 30 / 6 = 5 cm

11. ಚೌಕದ ಸುತ್ತಳತೆ = 4 x ಬಾಹು

32 = 4 x ಬಾಹು

3ಬಾಹು =32/4 = 8 cm

12. ಆಯತಾಕಾರದ ಉದ್ಯಾನವನದ ಉದ್ದ = 130 m, ಅಗಲ = 120 m

ಸುತ್ತಳತೆ = 2 (ಉದ್ದ + ಅಗಲ)

= 2 (130 + 120)

= 2 (250) = *500 m*

1 ಮೀಟರ್ ತಂತಿ ಬೇಲಿಯ ಬೆಲೆ = ₹ 30

500 ಮೀಟರ್ ತಂತಿ ಬೇಲಿಗೆ ತಗುಲುವ ಒಟ್ಟು ವೆಚ್ಚ = 500 m × ₹ 30 = *₹ 15,000*

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 7: ಭಿನ್ನರಾಶಿಗಳು

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (3 × 1 = 3)

1. ಕೆಳಗಿನ ಭಿನ್ನರಾಶಿಗಳಲ್ಲಿ ಅತ್ಯಂತ ಚಿಕ್ಕ ಭಿನ್ನರಾಶಿ ಸಂಖ್ಯೆ:

A. 5/4 B. 5/3 C. 5/6 D. 5/2

2. 16/9 ನ್ನು ಮಿಶ್ರ ಭಿನ್ನರಾಶಿಯಾಗಿ ವ್ಯಕ್ತಪಡಿಸಿದಾಗ:

A. 2 7/9 B. 1 5/9 C. 1 7/9 D. 2 5/9

3. ಒಂದು ಗಂಟೆಯಲ್ಲಿ 45 ನಿಮಿಷವನ್ನು ಕೆಳಗಿನ ಯಾವ ಭಿನ್ನರಾಶಿಯು ಸೂಚಿಸುತ್ತದೆ:

A. ಯಾವುದೂ ಅಲ್ಲ B. 3/4 C. 1/4 D. 1/2

II. ಕೆಳಗಿನವುಗಳನ್ನು ಪ್ರಶ್ನೆಗಳು ಬಿಡಿಸಿ (4 × 1 = 4)

4. ಸೂಕ್ತ ಚಿಹ್ನೆ ಬಳಸಿ >, <, = 6/7 ☐ 5/7

5. ಸಮ ಭಿನ್ನರಾಶಿ

6. ವಿಷಮ ಭಿನ್ನರಾಶಿ

7. 40/80 ಭಿನ್ನರಾಶಿಯನ್ನು ಅದರ ಕನಿಷ್ಠ ರೂಪಕ್ಕೆ ಇಳಿಸಿ.

III. ಕೆಳಗಿನ ಲೆಕ್ಕಗಳನ್ನು ಬಿಡಿಸಿ (3 × 2 = 6)

8. 3/5 – 1/2 ವ್ಯವಕಲನ ಮಾಡಿ

9. 5/12 ಮತ್ತು 30/84 ಭಿನ್ನರಾಶಿಗಳು ಸಮಾನ ಭಿನ್ನರಾಶಿಗಳೇ? ಎಂದು ಪರಿಶೀಲಿಸಿ.

10. 1/3 ಎರಡು ಸಮಾನ ಭಿನ್ನರಾಶಿಗಳನ್ನು ಬರೆಯಿರಿ

IV. ಕೆಳಗಿನ ಲೆಕ್ಕವನ್ನು ಬಿಡಿಸಿ (1 × 3 = 3)

11. ಸಂಕಲನ ಮಾಡಿ 3/4 + 1/3 + 2/5

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ (1 × 4 = 4)

12. ಕೇಶವ್ ತನ್ನ ಕೋಣೆಯ ಗೋಡೆಯ 2/3 ಭಾಗದಷ್ಟು ಜಾಗವನ್ನು ಬಣ್ಣ ಬಳಿದನು. ಅವನ ತಂದೆ ಧರಮ್ ಅವನಿಗೆ ಸಹಾಯ ಮಾಡಿ 1/5 ಭಾಗದಷ್ಟು ಜಾಗವನ್ನು ಬಣ್ಣ ಬಳಿದನು. ಅವರು ಒಂದು ಪೂರ್ಣದ ಎಷ್ಟು ಭಾಗವನ್ನು ಬಣ್ಣ ಬಳಿಯದೇ ಉಳಿಸಿದ್ದಾರೆ?

ಮಾದರಿ ಉತ್ತರಗಳು

1. C. 5/6

2. C. 1 7/9

3. B. 3/4

4. >

5. ಸಮ ಭಿನ್ನರಾಶಿ: ಒಂದು ಭಿನ್ನರಾಶಿಯ ಅಂಶವು ಛೇದಕ್ಕಿಂತ ಕಡಿಮೆಯಿದ್ದರೆ ಅದನ್ನು ಸಮ ಭಿನ್ನರಾಶಿ ಎನ್ನುವರು.

6. ವಿಷಮ ಭಿನ್ನರಾಶಿ: ಒಂದು ಭಿನ್ನರಾಶಿಯ ಅಂಶವು ಛೇದಕ್ಕಿಂತ ಹೆಚ್ಚಿದ್ದರೆ ಅಥವಾ ಸಮವಿದ್ದರೆ ಅದನ್ನು ವಿಷಮ ಭಿನ್ನರಾಶಿ ಎನ್ನುವರು.

7. 1/2

8. 1/10

9. 12 ಮತ್ತು 84 ರ ಸಾಮಾನ್ಯ ಛೇದ = 84.

5/12 ನ್ನು ಸಮಾನ ಛೇದಕ್ಕೆ ತಂದಾಗ: (5 × 7) / (12 × 7) = 35/84

35/84 ≠ 30/84

ಆದ್ದರಿಂದ, ಇವು ಸಮಾನ ಭಿನ್ನರಾಶಿಗಳಲ್ಲ.

10. 1/3 =2/6 =3/9

11. 89/60

12.

ಕೇಶವ್ ಬಣ್ಣ ಬಳಿದ ಭಾಗ = 2/3

ತಂದೆ ಧರಮ್ ಬಣ್ಣ ಬಳಿದ ಭಾಗ = 1/5

ಬಣ್ಣ ಬಳಿಯದೇ ಉಳಿದ ಭಾಗ = 1 - (2/3 + 1/5)

= 1 - (10/15 + 3/15)

= 1 - 13/15

= (15 - 13) / 15 = 2/15

ಬಣ್ಣ ಬಳಿಯದೇ ಉಳಿದ ಜಾಗ = 2/15

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 8: ರಚನೆಗಳೊಂದಿಗೆ ಆಟ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (4 × 1 = 4)

1. ಚೌಕವು ಹೊಂದಿರುವ ಸಮಬಾಹುಗಳ ಸಂಖ್ಯೆ.

A. 4 B. 2 C. 3 D. 5

2. ವೃತ್ತದ ಮೇಲಿರುವ ಎಲ್ಲಾ ಬಿಂದುಗಳು ಇದರಿಂದ ಸಮದೂರದಲ್ಲಿರುತ್ತವೆ.

A. ತ್ರಿಜ್ಯ B. ಕೇಂದ್ರ C. ವ್ಯಾಸ D. ಪರಿಧಿ

3. AB ಸರಳರೇಖೆಯ ಉದ್ದ 7cm. 'M' ಬಿಂದು AB ಯ ಮಧ್ಯ ಬಿಂದು. ಹಾಗಾದರೆ, A ಬಿಂದುವಿನಿಂದ 'M' ಗಿರುವ ಅಂತರ ಎಷ್ಟು?

A. 7cm B. 14cm C. 49cm D. 3.5cm

4. ಚೌಕದಲ್ಲಿ ಪ್ರತಿಯೊಂದು ಕೋನದ ಅಳತೆ.

A. 45^o B. 60^o C. 90^o D. 120^o

II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳೊಂದಿಗೆ ಭರ್ತಿಮಾಡಿ. (4 × 1 = 4)

5. ವೃತ್ತವನ್ನು ರಚಿಸುವಾಗ ಬಳಸುವ ಉಪಕರಣ _______.

6. ಒಂದು ಕೊಟ್ಟಿರುವ ರೇಖಾಖಂಡದ ಮೇಲೆ ಗೊತ್ತಾದ ಬಿಂದುವಿನ ಮೂಲಕ ಲಂಬಾರ್ಧಕವನ್ನು ಎಳೆಯಲು _______ ಉಪಯೋಗಿಸುತ್ತೇವೆ.

7. ಆಯತದ ಎಲ್ಲಾ 4 ಕೋನಗಳ ಮೊತ್ತ _______.

8. ವೃತ್ತದ ಕೇಂದ್ರಬಿಂದುವಿನಿಂದ ಪರಿಧಿಯ ಮೇಲಿನ ಯಾವುದೇ ಬಿಂದುವಿಗಿರುವ ದೂರ _______.

III. ಕೆಳಗಿನ ಹೇಳಿಕೆಗಳು ಸರಿ ಅಥವಾ ತಪ್ಪು ಎಂದು ತಿಳಿಸಿ (5 × 1 = 5)

9. ಆಯತದ ಕರ್ಣಗಳು ಯಾವಾಗಲೂ ಸಮವಾಗಿರುತ್ತವೆ.

10. ಆಯತದ ಎಲ್ಲಾ ಬಾಹುಗಳು ಪರಸ್ಪರ ಸಮವಾಗಿರುತ್ತವೆ.

11. ಸುತ್ತುತ್ತಿರುವ / ತಿರುಗುತ್ತಿರುವ ಚೌಕವು ಅದರ ಬಾಹುಗಳು ಮತ್ತು ಎಲ್ಲಾ ಕೋನಗಳು ಸಮವಾಗಿರುವವರೆಗೆ ಅದು ಚೌಕವಾಗಿಯೇ ಇರುತ್ತದೆ.

12. ಆಯತದಲ್ಲಿ ಎರಡು ಕರ್ಣಗಳ ಛೇದನ ಬಿಂದುವು ಕರ್ಣಗಳನ್ನು ಸಮಭಾಗಗಳಾಗಿ ದ್ವಿಭಾಗಿಸುತ್ತದೆ.

13. ವರ್ಗವು 3 ಕರ್ಣಗಳನ್ನು ಹೊಂದಿರುತ್ತದೆ.

IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (2 × 2 = 4)

14. ರೇಖಾಗಣಿತದಲ್ಲಿ ರಚನೆಯನ್ನು ಮಾಡಲು ಬಳಸುವ ಪರಿಕರಗಳನ್ನು ಹೆಸರಿಸಿ?

15. ಆಯತ ಮತ್ತು ವರ್ಗಕ್ಕಿರುವ (ಚೌಕ) ಒಂದು ಸಾಮ್ಯತೆಯನ್ನು ಬರೆಯಿರಿ.

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ (1 × 3 = 3)

16. ಬಾಹುಗಳ ಅಳತೆ 4cm ಮತ್ತು 6cm ಇರುವಂತೆ ಆಯತವನ್ನು ರಚಿಸಿ, ಕರ್ಣಗಳನ್ನು ಎಳೆದು ಅಳತೆ ಮಾಡಿ ಅವು ಸಮನಾಗಿವೆಯೇ ಎಂದು ಪರೀಕ್ಷಿಸಿ.

ಮಾದರಿ ಉತ್ತರಗಳು

1. A. 4

2. B. ಕೇಂದ್ರ

3. D. 3.5cm

4. C. 90^o

5. ಕೈವಾರ

6. ಕೈವಾರ

7. 360^o

8. ತ್ರಿಜ್ಯ

9. ಸರಿ

10. ತಪ್ಪು

11. ಸರಿ

12. ಸರಿ

13. ತಪ್ಪು

14. ರೇಖಾಗಣಿತದಲ್ಲಿ ಬಳಸುವ ಪರಿಕರಗಳು: ಅಳತೆ ಪಟ್ಟಿ, ಕೈವಾರ, ಕೋನಮಾಪಕ, ವಿಭಾಜಕ

15. ಆಯತ ಮತ್ತು ವರ್ಗಕ್ಕಿರುವ ಸಾಮ್ಯತೆ: ಎರಡೂ ಆಕೃತಿಗಳಲ್ಲಿ ಪ್ರತಿ ಕೋನ 90^o ಇರುತ್ತದೆ.

16.



ತೀರ್ಮಾನ: AC = BD ಆಗಿರುವುದರಿಂದ, ಕರ್ಣಗಳು ಸಮನಾಗಿವೆ

ತರಗತಿ : 6 ವಿಷಯ : ಗಣಿತ ಅಂಕ : 20

ಘಟಕ 9 : ಸಮಮಿತಿ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (3 × 1 = 3)

1. ವಜ್ರಾಕೃತಿಯು ಹೊಂದಿರುವ ಸಮಮಿತಿ ಅಕ್ಷಗಳ ಸಂಖ್ಯೆ:

A. 1 B. 2 C. 3 D. 4

2. ಇಂಗ್ಲೀಷ್ 'V' ಅಕ್ಷರಕ್ಕೆ ಇರುವ ಸಮಮಿತಿ ಅಕ್ಷಗಳ ಸಂಖ್ಯೆ:

A. 1 B. ಅನಂತ C. 4 D. 6

3. ಒಂದು ನಿಯತ ಷಡ್ಭುಜಾಕೃತಿಗೆ ಇರುವ ರೇಖಾ ಸಮಮಿತಿಗಳ ಸಂಖ್ಯೆ:

A. 3 B. 6 C. 4 D. 12

II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳೊಂದಿಗೆ ಭರ್ತಿಮಾಡಿ. (3 × 1 = 3)

4. ಒಂದು ಚಿತ್ರವನ್ನು ನಿಖರವಾಗಿ ಎರಡು ಭಾಗಗಳನ್ನಾಗಿ ಮಾಡುವ ರೇಖೆಯನ್ನು _______ ಎನ್ನುವರು.

5. ಒಂದು ವರ್ಗಕ್ಕಿರುವ ರೇಖಾ ಸಮಮಿತಿಗಳ ಸಂಖ್ಯೆ _______.

6. ಒಂದು ವಜ್ರಾಕೃತಿಯ ಸಮಮಿತಿ ರೇಖೆಗಳು ಅದರ ______ ಆಗಿರುತ್ತವೆ.

III. ಕ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (3 × 1 = 3)

7. ಅರ್ಧ ವೃತ್ತ ಹೊಂದಿರುವ ಭ್ರಮಣ ಸಮಮಿತಿ ಕ್ರಮ ಎಷ್ಟು?

8. ಸಮಮಿತಿ ಅಕ್ಷ ವ್ಯಾಖ್ಯಾನಿಸಿ

9. ಭ್ರಮಣ ಕೇಂದ್ರ ವ್ಯಾಖ್ಯಾನಿಸಿ

IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (2 × 2 = 4)

10 A) ಈ ಕೆಳಗಿನ ಭ್ರಮಣ ಕೋನ ಹೊಂದಿರುವ ಆಕೃತಿಗಳ ಭ್ರಮಣ ಸಮಮಿತಿ ಕ್ರಮವನ್ನು ಕಂಡುಹಿಡಿಯಿರಿ: i) 90^o ii) 120^o

11. ಅಡ್ಡ ರೇಖಾ ಸಮಮಿತಿ ಅಕ್ಷ ಹೊಂದಿರುವ ಯಾವುದಾದರೂ ನಾಲ್ಕು ಇಂಗ್ಲಿಷ್ ಅಕ್ಷರಗಳನ್ನು ಬರೆಯಿರಿ.

V. ಕೆಳಗಿನ ಸಮಸ್ಯೆಯನ್ನು ಬಿಡಿಸಿ . (1 × 3 = 3)

12. ಈ ಕೆಳಗಿನ ಆಕೃತಿಗಳ ಚಿತ್ರ ಬರೆದು ಸಮಮಿತಿ ರೇಖೆ ಎಳೆಯಿರಿ:

a. ಸಮಬಾಹು ತ್ರಿಭುಜ b. ಆಯತ c. ವರ್ಗ

VI. ಕೆಳಗಿನ ಲೆಕ್ಕಗಳನ್ನು ಬಿಡಿಸಿ (1 × 4 = 4)

13. ಈ ಚಿತ್ರಗಳ ಭ್ರಮಣ ಸಮಮಿತಿ ಕೋನಗಳನ್ನು ಬರೆಯಿರಿ

ಮಾದರಿ ಉತ್ತರಗಳು

1. B. 2

2. A. 1

3. B. 6

4. ಸಮಮಿತಿ ರೇಖೆ

5. 4

6. ಕರ್ಣಗಳು

7. 1

8. ಸಮಮಿತಿ ಅಕ್ಷ: ಒಂದು ಸಮತಲಾಕೃತಿಯಲ್ಲಿ ಒಂದು ರೇಖೆಯು ಉದ್ದಕ್ಕೂ ಆಕೃತಿಗಳು ಪರಸ್ಪರ ಐಕ್ಯವಾಗುವ ಎರಡು ಭಾಗಗಳಂತೆ ಕತ್ತರಿಸಿದರೆ ಆ ರೇಖೆಯನ್ನು ಸಮಮಿತಿ ಅಕ್ಷ ಎನ್ನುವರು.

9. ಭ್ರಮಣ ಕೇಂದ್ರ:*ಭ್ರಮಣ ಕೇಂದ್ರ ಒಂದು ಆಕೃತಿಯನ್ನು ಒಂದು ನಿರ್ದಿಷ್ಟ ಬಿಂದುವಿನ ಸುತ್ತಲೂ ನಿರ್ದಿಷ್ಟ ಕೋನದಲ್ಲಿ ತಿರುಗಿಸಿದಾಗ ಮೊದಲಿನಂತೆ ಕಂಡರೆ ಆ ಕೇಂದ್ರವನ್ನು ಭ್ರಮಣ ಕೇಂದ್ರ ಎನ್ನುವರು.

10. i) 90^o ಭ್ರಮಣ ಕೋನ ಹೊಂದಿರುವ ಆಕೃತಿಯ ಭ್ರಮಣ ಕ್ರಮ = $360^o \div 90^o = 4$

ii) 120^o ಭ್ರಮಣ ಕೋನ ಹೊಂದಿರುವ ಆಕೃತಿಯ ಭ್ರಮಣ ಕ್ರಮ = $360^o \div 120^o = 3$

11. ಅಡ್ಡ ರೇಖಾ ಸಮಮಿತಿ ಹೊಂದಿರುವ ನಾಲ್ಕು ಇಂಗ್ಲಿಷ್ ಅಕ್ಷರಗಳು: *B, C, D, E* (ಅಥವಾ H, I, K, O, X).

12. ವಿದ್ಯಾರ್ಥಿಗಳು ಈ ಕೆಳಗಿನ ಆಕೃತಿಗಳನ್ನು ರಚಿಸಿ ಸಮಮಿತಿ ರೇಖೆಗಳನ್ನು ಎಳೆದಿರಬೇಕು:

ಸಮಬಾಹು ತ್ರಿಭುಜ: 3 ಸಮಮಿತಿ ರೇಖೆಗಳನ್ನು ಎಳೆಯಬೇಕು.

ಆಯತ:2 ಸಮಮಿತಿ ರೇಖೆಗಳನ್ನು ಎಳೆಯಬೇಕು.

ವರ್ಗ: 4 ಸಮಮಿತಿ ರೇಖೆಗಳನ್ನು ಎಳೆಯಬೇಕು.

13. a) 90 b) 60 c) 360 d) 180

ತರಗತಿ : 6 **ವಿಷಯ: ಗಣಿತ** **ಅಂಕ : 20**

ಘಟಕ 10: ಸೊನ್ನೆಯ ಮತ್ತೊಂದು ಬದಿ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (5 × 1 = 5)

1. ಸಂಖ್ಯಾ ರೇಖೆಯ ಮೇಲೆ ಎಡದಿಂದ ಅತಿ ದೂರದಲ್ಲಿರುವ ಸಂಖ್ಯೆ.

A. -12 B. -5 C. 0 D. 10

2. ಸೊನ್ನೆಗಿಂತ ಕಡಿಮೆ ಇರುವ ಸಂಖ್ಯೆಗಳು.

A. ಧನ ಸಂಖ್ಯೆಗಳು B. ದಶಮಾಂಶಗಳು C. ಪೂರ್ಣ ಸಂಖ್ಯೆಗಳು D. ಋಣ ಸಂಖ್ಯೆಗಳು

3. ಋಣ ಸಂಖ್ಯೆಗಳಿಗೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೇಳಿಕೆ?

A. ಅವು ಯಾವಾಗಲೂ ಧನ ಸಂಖ್ಯೆಗಳಿಗಿಂತ ಕಡಿಮೆ.

B. ಅವು ಯಾವಾಗಲೂ ಧನ ಸಂಖ್ಯೆಗಳಿಗಿಂತ ಹೆಚ್ಚು.

C. ಅವು ಧನ ಸಂಖ್ಯೆಗಳಿಗೆ ಸಮ.

D. ಅವು ಭಿನ್ನರಾಶಿ ಸಂಖ್ಯೆಗಳಿಗೆ ಸಮವಾಗಿರುತ್ತವೆ.

4. ಧನಾತ್ಮಕ ಹಾಗೂ ಋಣಾತ್ಮಕ ಅಲ್ಲದ ಸಂಖ್ಯೆ.

A. -1 B. 0 C. 1 D. 100

5. +7 ರ ವಿಲೋಮ ಸಂಖ್ಯೆ.

A. +7 B. -7 C. 0 D. 1

II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳೊಂದಿಗೆ ಭರ್ತಿಮಾಡಿ. (5 × 1 = 5)

6. ಸಂಖ್ಯಾ ರೇಖೆಯ ಮೇಲೆ (-15) ಸೊನ್ನೆಯ ______ ಭಾಗದಲ್ಲಿರುತ್ತದೆ.

7. ಸಂಖ್ಯಾ ರೇಖೆಯ ಮೇಲೆ (10) ಸೊನ್ನೆಯ ______ ಭಾಗದಲ್ಲಿರುತ್ತದೆ.

8. (-1) ರ ಸಂಕಲನದ ವಿಲೋಮ ______.

9. (-11) + (-2) + (-1) = ______.

10. (+) ಚಿಹ್ನೆ ಹೊಂದಿರುವ ಪೂರ್ಣಾಂಕವು ಯಾವಾಗಲೂ ಸೊನ್ನೆಗಿಂತ ______ ಆಗಿರುತ್ತದೆ.

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ / ಸರಿ-ತಪ್ಪು ತಿಳಿಸಿ (4 × 1 = 4)

11. (-100) ಕ್ಕಿಂತ ಕಡಿಮೆ ಮತ್ತು (-150) ಕ್ಕಿಂತ ಹೆಚ್ಚು ಇರುವ ಯಾವುದಾದರೂ 5 ಪೂರ್ಣಾಂಕಗಳನ್ನು ಬರೆಯಿರಿ.

12. ಲಾಭ ಧನಾತ್ಮಕವಾದರೆ, ₹ 50 ಲಾಭವನ್ನು ಮತ್ತು ₹ 30 ನಷ್ಟವನ್ನು ಹೇಗೆ ನಿರೂಪಿಸುವಿರಿ?

13. ಸರಿ ಅಥವಾ ತಪ್ಪು ತಿಳಿಸಿ: "ಸೊನ್ನೆಯು ಅತ್ಯಂತ ಚಿಕ್ಕ ಸ್ವಾಭಾವಿಕ ಸಂಖ್ಯೆಯಾಗಿದೆ."

14. ಸರಿ ಅಥವಾ ತಪ್ಪು ತಿಳಿಸಿ: "ಪ್ರತಿ ಧನ ಪೂರ್ಣಾಂಕವು ಋಣ ಪೂರ್ಣಾಂಕಕ್ಕಿಂತ ದೊಡ್ಡದಾಗಿರುತ್ತದೆ."

IV. ಕೆಳಗಿನ ಲೆಕ್ಕಗಳನ್ನು ಬಿಡಿಸಿ (3 × 2 = 6)

15. ಆಳವು ಧನಾತ್ಮಕ ಎಂದು ಊಹಿಸಿದಾಗ, ಕೆಳಗಿನವುಗಳನ್ನು ಸೂಕ್ತ ಚಿಹ್ನೆಗಳೊಂದಿಗೆ ವ್ಯಕ್ತಪಡಿಸಿ:

a) 25 m ಆಳ b) 45 m ಎತ್ತರ

16. ಕೆಳಗಿನವುಗಳನ್ನು ಸಂಖ್ಯಾ ರೇಖೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ಬೆಲೆಗಳನ್ನು ಕಂಡುಹಿಡಿಯಿರಿ:

a) -1 ಕ್ಕಿಂತ 4 ಕಡಿಮೆ b) -2 ಕ್ಕಿಂತ 5 ಹೆಚ್ಚು

17. ಕೆಳಗಿನ ಹೇಳಿಕೆಗಳು ಸರಿಯಾಗಿವೆಯೇ ಎಂಬುದನ್ನು ಪರೀಕ್ಷಿಸಿ:

i. 3 + (0 + 9) = (3 + 0) + 9 ii. 34 + {90 + (-11)} = (34 + 90) + (-11)

ಮಾದರಿ ಉತ್ತರಗಳು

1. A. -12

2. D. ಋಣ ಸಂಖ್ಯೆಗಳು

3. A. ಅವು ಯಾವಾಗಲೂ ಧನ ಸಂಖ್ಯೆಗಳಿಗಿಂತ ಕಡಿಮೆ.

4. B. 0

5. B. -7

6. ಎಡ

7. ಬಲ

8. +1

9. -14

10. ದೊಡ್ಡದು

11. -101, -102, -103, -104, -105 (ಅಥವಾ -149 ರ ವರೆಗಿನ ಯಾವುದೇ 5 ಸಂಖ್ಯೆಗಳು).

12. ಲಾಭವನ್ನು +₹50 ಎಂದು ಮತ್ತು ನಷ್ಟವನ್ನು-₹30 ಎಂದು ನಿರೂಪಿಸುತ್ತೇವೆ.

13. ತಪ್ಪು

14. ಸರಿ

15. ಆಳವು ಧನಾತ್ಮಕ (+ve) ಎಂದಾಗ:

a) 25 m ಆಳ = +25 m

b) 45 m ಎತ್ತರ = -45 m

16. ಸಂಖ್ಯಾ ರೇಖೆಯ ಮೇಲಿನ ಲೆಕ್ಕಾಚಾರ:

a) -1 ಕ್ಕಿಂತ 4 ಕಡಿಮೆ = -1 - 4 = -5 (ಸಂಖ್ಯಾ ರೇಖೆಯಲ್ಲಿ -1 ರಿಂದ 4 ಹೆಜ್ಜೆ ಎಡಕ್ಕೆ).

b) -2 ಕ್ಕಿಂತ 5 ಹೆಚ್ಚು = -2 + 5 = +3 (ಸಂಖ್ಯಾ ರೇಖೆಯಲ್ಲಿ -2 ರಿಂದ 5 ಹೆಜ್ಜೆ ಬಲಕ್ಕೆ).

17. i. 3 + (0 + 9) = (3 + 0) + 9

3 + 9 = 3 + 9

12 = 12 (ಹೇಳಿಕೆ ಸರಿಯಾಗಿದೆ)

ii. 34 + {90 + (-11)} = (34 + 90) + (-11)

34 + {79} = 124 - 11

113 = 113 (ಹೇಳಿಕೆ ಸರಿಯಾಗಿದೆ)

ಕೊಡುಗೆ:

ಜಿಪಿಟಿ ಶಿಕ್ಷಕರ ಶೈಕ್ಷಣಿಕ ಸಂಪನ್ಮೂಲಗಳು,ಉತ್ತ ರ ಕನ್ನ ಡ

(https://chandugokarna-bit.github.io/gpt-teachers-resources/#)